# <u>ಬೆಳಗಾವಿ ಮಹಾನಗರ ಪಾಲಿಕೆ</u>

## <u>ಬೆಳಗಾವಿ ಮಹಾನಗರದ ಕರದಾತರಲ್ಲಿ ಪಾಲಿಕೆಯ ಮನವಿ</u>

ಬೆಳಗಾವಿ ಮಹಾನಗರ ಪಾಲಿಕೆಯ ಆಯ್ದು ಕೆಲವು ವಾರ್ಡುಗಳಲ್ಲಿ ಸದ್ಯಕ್ಕೆ ಸ್ತ್ರೀ-ಶಕ್ತಿ ಗುಂಪಿನ ಸದಸ್ಯರುಗಳು ಮನೆ ಮನೆಯಿಂದ ಕಸ ಸಂಗ್ರಹಣೆಯ ಕಾರ್ಯವನ್ನು ಪ್ರಾರಂಭಿಸಿದ್ದು, ಸದರಿ ವಾರ್ಡುಗಳ ನಾಗರಿಕರು ತಮ್ಮ ಮನೆಗೆ ಬರುವ ಕಸ ಸಂಗ್ರಹಣೆಗಾಗಿ ದಿನಾಲೂ ತಮ್ಮ ಮನೆಯಲ್ಲಿ ಶೇಖರಣೆಯಾಗುವ ಕಸವನ್ನು ನೀಡಲು ವಿನಂತಿಸಲಾಗಿದೆ. ಇದರ ಬದಲಾಗಿ ಯಾವುದೇ ತರದ ಕಸವನ್ನು ಸುಡುವುದಾಗಲಿ ಅಥವಾ ಚರಂಡಿಯಲ್ಲಿ/ರಸ್ತೆಯಲ್ಲಿ/ಖಾಲಿ ನಿವೇಶನದಲ್ಲಿ/ನಾಲಾದಲ್ಲಿ ಚೆಲ್ಲುವದಾಗಲಿ ಮಾಡದೆ ಮನೆ ಮನೆಗೆ ಕಸ ಸಂಗ್ರಹಿಸಲು ಬರುವ ವ್ಯಕ್ತಿಗೆ ನೀಡಬೇಕು ಮತ್ತು ಪಾಲಿಕೆಯ ವತಿಯಿಂದ ಇಡಲಾದ ಮೆಟಾಲಿಕ್ ಕಂಟೇನರ್‌ದಲ್ಲಿ ಯಾರೂ ಬೆಂಕಿ ಹಚ್ಚುವದಾಗಲಿ/ ಸುಡುವ ಕೆಂಡವನ್ನು ಹಾಕುವದಾಗಲಿ ಅಥವಾ ಕಟ್ಟಡದ ಭಗ್ನಾವಶೇಷಗಳನ್ನು ಎಸೆಯುವದಾಗಲಿ ಮಾಡಬಾರದು ಮತ್ತು ಈ ರೀತಿ ಮಾಡುವುದನ್ನು ಸಂಪೂರ್ಣ ನಿಷೇಧಿಸಲಾಗಿದೆ, ಯಾರಾದರು ಪಾಲಿಕೆಯ ಕಂಟೇನರ್‌ದಲ್ಲಿ ಪಾಲಿಕೆಯ ನಿಷೇಧವನ್ನು ಉಲ್ಲಂಘಿಸಿ ಬೆಂಕಿ ಹಚ್ಚುವದಾಗಲಿ/ ಸುಡುವ ಕೆಂಡವನ್ನು ಹಾಕುವದಾಗಲಿ ಅಥವಾ ಕಟ್ಟಡದ ಭಗ್ನಾವಶೇಷಗಳನ್ನು ಎಸೆಯುವದನ್ನು ಗಮನಿಸಿದಲ್ಲಿ ಪಾಲಿಕೆಯ **24** ಗಂಟೆಗಳ ಕಾಲ ಕಾರ್ಯನಿರತವಿರುವ ಸಹಾಯವಾಣಿ ಕೇಂದ್ರದ ದೂರವಾಣಿ ಸಂಖ್ಯೆ **2405316** ಗೆ ತಿಳಿಸಲು ಮನವಿ ಮಾಡಲಾಗಿದೆ. ಪಾಲಿಕೆಯ ಕಂಟೇನರ್ ಉದ್ದೇಶದ ವಿರುದ್ಧ ಕೆಲಸ ಮಾಡಿದವರ ವಿರುದ್ಧ ಸೂಕ್ತ ದಂಡ ವಿಧಿಸಿ ಕಾನೂನು ಕ್ರಮ ಜರುಗಿಸಲಾಗುವದು.

"ಪಾಲಿಕೆಯ ನಿರ್ಮಲನಗರ ಯೋಜನೆಗೆ ಸಹಕರಿಸಿ, ಮನೆ ಮನೆಯಿಂದ ಕಸ ಸಂಗ್ರಹಿಸಲು ಬರುವವರಿಗೆ ನಿಮ್ಮ ಮನೆಯ ಕಸವನ್ನು ನೀಡಿ. ಕಂಟೇನರ್ ದುರುಪಯೋಗ ಮಾಡಬೇಡಿ, ಕಂಟೇನರದಲ್ಲಿ ಸುಡುವ ಕೆಂಡವನ್ನು ಎಸೆಯಬೇಡಿ, ಕಟ್ಟಡದ ಅಳಿದುಳಿದ ಭಗ್ನಾವಶೇಷಗಳನ್ನು ಹಾಕುವದನ್ನು ತಪ್ಪಿಸಿ ಪಾಲಿಕೆಯೊಂದಿಗೆ ಸಹಕರಿಸಿರಿ."

ಆಯುಕ್ತರು
ಮಹಾನಗರ ಸಭೆ, ಬೆಳಗಾವಿ